ದಾಸ್ತೋವ್‌ಸ್ಕಿಯ ಕಲಾತ್ಮಕತೆ, ತಾತ್ವಿಕತೆ ಮತ್ತು ಸೈದ್ಧಾಂತಿಕ ಬದ್ಧತೆಗಳ ಮೊತ್ತವಾಗಿ ಬೃಹತ್ತಾದ ಹಾಗೂ ಅವನ ಜೀವಿತ ಕಾಲದ ಶ್ರೇಷ್ಠ ಕೃತಿಯಾಗಿ 'ಬ್ರದರ್ಸ್ ಕರಮಜೋವ್' ರೂಪುಗೊಳ್ಳುತ್ತದೆ. ಆದರೂ ಮಕ್ಕಳ ಲೋಕದ ಬಗೆಗಿನ ತನ್ನ ತುಡಿತವನ್ನು ಪೂರಾ ಕಳೆದುಕೊಳ್ಳಲಾಗದ ದಾಸ್ತೋವ್‌ಸ್ಕಿ ಕಾದಂಬರಿಯಲ್ಲಿ ಕೋಲ್ಯಾ, ಇಲ್ಯೂಶ ಮುಂತಾದ ಮಕ್ಕಳು, ಅಲ್ಲಿನ ಮುಗ್ಧಲೋಕ ಹಾಗೂ ಅವರ ಪ್ರಾಣಿಗಳೊಂದಿಗಿನ ಒಡನಾಟವನ್ನು ತುಂಬಾ ಪ್ರಧಾನವಾಗಿ ಅಲ್ಲದಿದ್ದರೂ ಮೋಹಕವಾಗಿ ಚಿತ್ರಿಸಿದ್ದಾನೆ.

ಹಾಗೆ ನೋಡಿದರೆ, 'ಕರಮಜೋವ್ ಸಹೋದರರು' ಕಾದಂಬರಿ ತನ್ನ ಕಾಲಘಟ್ಟವನ್ನೂ ಆ ಕಾಲಘಟ್ಟದ ತಲೆಮಾರನ್ನೂ ಪ್ರತಿನಿಧಿಸುವ, ನಿಜ ತಂದೆಗಾಗಿ ಹಾಗೂ ಆಧ್ಯಾತ್ಮಿಕ ಹಸಿವಿನ ಹುಡುಕಾಟದ ಆದರೆ ಅವೆರಡೂ ಸಿಕ್ಕದೇ ಬೆಳೆದ ರಷ್ಯನ್ ಮಕ್ಕಳ ಕಥೆಯೇ. ಅದರೆ, ಇಲ್ಲಿ ಅನಾವರಣಗೊಳ್ಳುವ ಸಾಮಾಜಿಕ ಸ್ಥಿತ್ಯಂತರಗಳು, ಅದರಿಂದಾಗಿ ಅವರು ಅನುಭವಿಸುವ ಯಾತನೆಗಳು ಹತ್ತೊಂಬತ್ತನೆಯ ಶತಮಾನದ ಇಡೀ ರಷ್ಯನ್ ಮಕ್ಕಳ ಯಾತನೆಗಳಾಗಿ ಕೊಂಚ ನಿರ್ದಯ ಹಾಗೂ ತಲೆ ಚಿಟ್ಟು ಹಿಡಿಯುವಂತೆ ಚಿತ್ರಿಸಲ್ಪಟ್ಟಿವೆ. ಇಲ್ಲಿ ವೈಯಕ್ತಿಕ ನರಳುವಿಕೆ ಹಾಗೂ ಇಡೀ ತಲೆಮಾರಿನ ನರಳುವಿಕೆ, ಬಾಹ್ಯ ಹಾಗೂ ಆಂತರ್ಯದ ನೋವಿನ ಸಂಗತಿಗಳು ಬಹುತೇಕ ಈ ಕಥಾನಕದ ದನಿಯಾಗಿ ಲೋಕದ ನೈತಿಕ ಹಾಗೂ ಆಧ್ಯಾತ್ಮಿಕ ಅಧಃಪತನದಂತೆ ಎಣಿಸಲಸದಳವಾಗಿ ನಿರೂಪಿಸಲ್ಪಟ್ಟಿವೆ. ಇದಕ್ಕಾಗಿ ಲೇಖಕ 'ದ ಹೌಸ್ ಆಫ್ ದ ಡೆಡ್' ಕೃತಿಯಲ್ಲಿರುವಂತೆ ಹವ್ಯಾಸಿ ಚರಿತ್ರೆಯ ಲೇಖಕನಂತೆ ಕಾಲಾನುಕ್ರಮದ ವರದಿಯ ತಂತ್ರಕ್ಕೆ ಮೊರೆಹೋಗಿದ್ದಾನೆ.

ದಾಸ್ತೋವ್‌ಸ್ಕಿಯ ಬರವಣಿಗೆಯ ಧಾಟಿಯು ನಿಜಾರ್ಥದಲ್ಲಿ ಪಾತ್ರವೊಂದರ ಒಳಕ್ಕಿಳಿಯುವ ಮನೋವೈಜ್ಞಾನಿಕ ಸಂಗತಿಗಳಿಗೆ ಪೂರಕವಾಗಿರುತ್ತದೆ. 'ಬ್ರದರ್ಸ್ ಕರಮಜೋವ್' ನಿರೂಪಣೆಯು ಮೇಲ್ನೋಟಕ್ಕೆ ಫ್ಯೊಡರ್ ಕರಮಜೋವ್‌ನ ಕೊಲೆಯ ಸುತ್ತ ಹೆಣೆಯಲ್ಪಟ್ಟಿರುವಂತೆ ಕಂಡರೂ ವಾಸ್ತವವಾಗಿ ಅದರ ಕೇಂದ್ರ ಇರುವುದು 'ನಂಬಿಕೆ' ಹಾಗೂ 'ಅಪನಂಬಿಕೆ'ಗಳ ನಡುವಿನ ನಾಟಕೀಯ ಉದ್ವೇಗದಲ್ಲಿ. ತನ್ನ ನಿರಂತರ ಅನ್ವೇಷಣೆಗಳಿಂದ ಪ್ರಚಲಿತದಲ್ಲಿದ್ದ ನಿರೂಪಣೆಯ ತಂತ್ರ ಹಾಗೂ ಸಾಧನಗಳನ್ನು ತನ್ನ ದೈತ್ಯ ಸೃಜನಶೀಲತೆಯಿಂದ ಮಾರ್ಪಡಿಸುವ ಮೂಲಕ ಯೂರೋಪಿಯನ್ ಹಾಗೂ ರಷ್ಯನ್ ಸಾಹಿತ್ಯಿಕ ಸಂಪ್ರದಾಯಗಳನ್ನು ಶ್ರೀಮಂತಗೊಳಿಸಿದವನು. ಅಂತೆಯೇ, ದಾಸ್ತೋವ್‌ಸ್ಕಿ ತನ್ನ ಕಾದಂಬರಿಗಳನ್ನು ತನ್ನ ಕಾಲದ ವಾಸ್ತವದೊಂದಿಗೆ ರಷ್ಯಾದ ಆದರ್ಶವಾದಿ ಧ್ಯೇಯದ ಕಾಣ್ಕೆಗಳನ್ನು ಬೆಸೆಯುವ ಪ್ರಯತ್ನವನ್ನೂ ಮಾಡಿದ್ದಾನೆ. ಒಂದೆಡೆ, ರಷ್ಯಾದ ಆಧುನಿಕತೆ ಹಾಗೂ ಅದರೊಂದಿಗಿನ ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಘಟನೆಯನ್ನು ಒಪ್ಪಿಕೊಳ್ಳುತ್ತಾನೆ. ಮತ್ತೊಂದೆಡೆ, ಅದನ್ನು ಅಲ್ಲಗಳೆಯಲು ಹಾಗೂ ರಾಷ್ಟ್ರೀಯ ಸಂರಕ್ಷಣಾ ದರ್ಶನದೊಂದಿಗೆ ಭಯದ ಭಾವದ ಚಾರಿತ್ರಿಕ ಭಾವಮಗ್ನತೆಯನ್ನು ಪುನರ್ ಸ್ಥಾಪಿಸಲು ನೋಡುತ್ತಾನೆ. ಇವನ ನಿರೂಪಣೆಗೆ ಯಾವುದು ಸಾಧ್ಯ ಅನ್ನುವುದಕ್ಕಿಂತ ಯಾವುದು ಸಂಭವನೀಯ ಅನ್ನುವುದರತ್ತ ಹೆಚ್ಚು ಒಲವಿದೆ.

ಮಾನವನ ಭೌತಿಕ ಹಾಗೂ ಮಾನಸಿಕ ತೊಳಲಾಟಗಳನ್ನು, ನೈತಿಕ ಸಂಕಟಗಳನ್ನು ಅತ್ಯಂತ ಸಹಜವಾಗಿ ಚಿತ್ರಿಸಿಬಿಡಬಲ್ಲ ದಾಸ್ತೋವ್‌ಸ್ಕಿಯನ್ನು ಕೇವಲ ವಾಸ್ತವವಾದಿ ಎಂದು ಕರೆದುಬಿಡಲಾಗುವುದಿಲ್ಲ. ಒಬ್ಬ ಚಿಂತಕನಾಗಿ, ದಾರ್ಶನಿಕನಾಗಿ ಮನುಕುಲದ ಏರಿಳಿತಗಳನ್ನು, ಸಂತೋಷ, ಸಂಕಟಗಳನ್ನು ಅನಾವರಣಗೊಳಿಸುವ ರೀತಿ ಓದುಗನನ್ನು ಬೆಚ್ಚಿಬೀಳಿಸುತ್ತದೆ. ವ್ಯಕ್ತಿಯೊಬ್ಬನ ಮೌಲ್ಯಗಳು ಹಾಗೂ ಅವನ ಘನತೆ ಮಣ್ಣು ಪಾಲಾಗುತ್ತಿರುವಾಗ ಅವನ ಆತ್ಮದ ಒಳಹೊಕ್ಕು ನೋಡುವ, ಅವನ ಆಸೆ ಆಕಾಂಕ್ಷೆಗಳನ್ನು ಹಿಡಿದಿಡುವ ಪರಿಯಿಂದಾಗಿ ದಾಸ್ತೋವ್‌ಸ್ಕಿ